ದಿನಾಂಕಃ **4.3.2026** ಎಂ.ವಿ.ಸಿ. ನಂಃ **349/2025** ಪಿಡಬ್ಲೂಃ **3**

**ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿ ಶ್ರೀ ಡಿ ಆರ್ ಕೆ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅವುಗಳ ಬಗ್ಗೆ ಮಾಹಿತಿಯನ್ನು ನಾನು ನೀಡಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿರುತ್ತವೆ.

ನಿಪಿ- 7 ನ್ನು ನಾನು ಅರ್ಜಿದಾರ ಆಂಜನೇಯುಲುಗೆ ಸಂಬಂಧಪಟ್ಟಂತೆ ನೀಡಿದ್ದೇನೆ. ನಿಪಿ-7 ರಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ನಿಪಿ-7 ರಲ್ಲಿ ಹೇಳಿರುವಂತೆ ಅರ್ಜಿದಾರನಿಗೆ ಶೇಕಡಾ 48 ರಷ್ಟು ಅಂಗನ್ಯೂನ್ಯತೆ ಉಂಟಾಗಿರುತ್ತದೆ.

ಪಾಟೀಸವಾಲು 3 ನೇ ಎದುರುದಾರರ ಪರವಾಗಿ ಶ್ರೀ ಕೆಜಿಎಲ್ ವಕೀಲರಿಂದಃ

ನಾನು ಅರ್ಜಿದಾರನಿಗೆ ಯಾವುದೇ ಚಿಕಿತ್ಸೆಯನ್ನು ನೀಡಿಲ್ಲ. ಅರ್ಜಿದಾರ ವಿಮ್ಸ್ ಆಸ್ಪತ್ರೆ ಬಳ್ಳಾರಿಯಲ್ಲಿ 9 ದಿವಸಗಳ ಕಾಲ ಒಳ ರೋಗಿಯಾಗಿ ಚಿಕಿತ್ಸೆ ಪಡೆದಿದ್ದ. ಅರ್ಜಿದಾರ ನನ್ನ ಬಳಿ ಡಿಸ್‌ಎಬಿಲಿಟಿ ಪ್ರಮಾಣಪತ್ರ ಪಡೆಯಲು ಮಾತ್ರ ಬಂದಿದ್ದ ಎಂದರೆ ಸರಿ. ಅರ್ಜಿದಾರನಿಗೆ ಸಂಬಂಧಪಟ್ಟ ಗಾಯ ಪ್ರಮಾಣ ಪತ್ರ ಮತ್ತು ಎಕ್ಸ್ ರೇಗಳನ್ನು ನಾನು ಪರೀಶೀಲಿಸಿದ್ದೆ. ದಿಃ 10-1-2026 ರಂದು ನಾನು ತೆಗೆಸಿದ ಎಕ್ಸ್ ರೇ ಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಲಾಗಿದೆ. ನಾನು ಮೆಡಿಕಲ್ ಗೈಡ್ ಲೈನ್ಸ್ ಪ್ರಕಾರ ಡಿಸ್‌ಎಬಿಲಿಟಿ ಸರ್ಟಿಫೀಕೇಟ್ ನೀಡಿಲ್ಲ ಎಂದರೆ ಸರಿಯಲ್ಲ. ಗಾಯ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಗಾಯಗಳಿಗೂ ಮತ್ತು ನಾನು ನೀಡಿರುವ ಡಿಸ್ ಎಬಿಲಿಟಿಗೂ ಒಂದಕ್ಕೊಂದು ತಾಳೆಯಾಗುವುದಿಲ್ಲ ಎಂದರೆ ಸರಿಯಲ್ಲ. ಮೆಡಿಕಲ್ ಗೈಡ್‌ಲೈನ್ಸ್ ಪ್ರಕಾರ ಅರ್ಜಿದಾರನಿಗೆ ಶೇಕಡಾ 5 ರಷ್ಟು ಮಾತ್ರ ಅಂಗನ್ಯೂನ್ಯತೆ ಪ್ರಮಾಣ ಉಂಟಾಗುತ್ತದೆ ಎಂದರೆ ಸರಿಯಲ್ಲ. ನಾನು ಅರ್ಜಿದಾರನಿಗೆ ಸಹಾಯ ಮಾಡಲು ಮತ್ತು ಆತನಿಗೆ ಹೆಚ್ಚಿನ ಪರಿಹಾರ ಸಿಗಲಿ ಎಂಬ ಕಾರಣದಿಂದಾಗಿ ನಿಪಿ-7 ರಂತೆ ಸುಳ್ಳು ಪ್ರಮಾಣ ಪತ್ರವನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಆಗಿ ಒಂದೂವರೆ ವರ್ಷದ ನಂತರ ನಾನು ಅರ್ಜಿದಾರನನ್ನು ಪರೀಕ್ಷಿಸಿ ಸರ್ಟಿಫಿಕೇಟ್ ನೀಡಿದ್ದೇನೆ ಎಂದರೆ ಸರಿ. ಅರ್ಜಿದಾರನು ಸತತವಾಗಿ ಚಿಕಿತ್ಸೆ ಪಡೆದಿದ್ದಲ್ಲಿ ನಾನು ಹೇಳಿದಂತೆ ಅಂಗ ನ್ಯೂನ್ಯತೆ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**